# ಟಿಶ್ಯು ಸೀರೆ ಮಿಂಚುವಳು ನೀರೆ





ಟಿಶ್ಯು ರೇಷ್ಮೆ ಸೀರೆ ಗ್ರ್ಯಾಂಡ್ ಲುಕ್ ಕೊಡುತ್ತಿದ್ದು ಫ್ಯಾಷನ್ ಟ್ರೆಂಡ್ ಆಗಿದೆ. ಮದುವೆ, ಮುಂಜಿಗಳಂತಹ ಶುಭ ಸಮಾರಂಭಗಳಿಗೆ ಹೋಗುವಾಗ ಮಿರಿ ಮಿರಿ ಮಿಂಚುವ ಟಿಶ್ಯು ಸೇರಿ ಅದ್ದೂರಿಯಾಗಿ ಕಾಣುತ್ತದೆ.

■ ಆಶಾ ಎಸ್. ಕುಲಕರ್ಣಿ

ಸೀರೆಗೂ ನೀರೆಗೂ ಅವಿನಾಭಾವ ಸಂಬಂಧ. ಕಾಲ ಬದಲಾದಂತೆ ಫ್ಯಾಷನಬಲ್ ಡ್ರೆಸ್‌ಗಳು ಮಾರುಕಟ್ಟೆಗೆ ಬಂದರೂ ಸೀರೆ ತನ್ನ ಎಂದಿನ ಸ್ಥಾನಮಾನವನ್ನು ಬಿಟ್ಟುಕೊಡುವುದಿಲ್ಲ. ಬದಲಿಗೆ ಫ್ಯಾಷನ್‌ಗೆ ತಕ್ಕಂತೆ ನಿತ್ಯನೂತನವಾಗಿ ಕಂಗೊಳಿಸುತ್ತಿದೆ. ಆಧುನಿಕ ಮನೋಭಾವದ ಮಹಿಳೆಯರೂ ಒಂದಾದರೂ ರೇಷ್ಮೆ ಸೀರೆಯನ್ನು ತಮ್ಮ ವಾರ್ಡ್‌ರೋಬ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ಸೀರೆಗಳಲ್ಲಿನ ವೈವಿಧ್ಯಮಯ, ಬೆರಗು ಮೂಡಿಸುವಂತಹ ವಿನ್ಯಾಸ, ಅಂಚುಗಳಲ್ಲಿ ವಿಭಿನ್ನತೆ, ಸೆರಗಿನಲ್ಲಿ ಕಲಾತ್ಮಕ ನೇಯ್ಗೆ... ಹೀಗೆ ವಿಭಿನ್ನವಾಗಿರುವ ಸೀರೆಯ ಅಂದಕ್ಕೆ ಮನಸೋಲದವರೇ ಇಲ್ಲ.

ಸೀರೆ ಹಳೆ, ಹೊಸ ತಲೆಮಾರಿನ ಎಲ್ಲ ಮಹಿಳೆಯರಿಗೂ ಅಚ್ಚುಮೆಚ್ಚು. ಸೀರೆಗಳು ಸಂಪ್ರದಾಯಕ್ಕೂ ಸೈ ಫ್ಯಾಷನ್‌ಗೂ ಸೈ ಎಂಬ ರೀತಿಯಲ್ಲಿ ಭಾರತದ ನಾನಾ ಪ್ರಾಂತಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿವೆ. ಕೆಲವು ಸೀರೆಗಳು ಬರೀ ಸಮಾರಂಭಕ್ಕೆ ಮಾತ್ರ ಧರಿಸಲು ಸೀಮಿತವಾಗಿರುತ್ತವೆ. ಕೆಲವು ಬರೀ ಪಾರ್ಟಿ ಅಥವಾ ಗೆಟ್ ಟುಗೆದರ್‌ಗೆ ಧರಿಸಲು ಸಿಮೀತವಾಗಿರುತ್ತವೆ. ಆದರೆ ಇತ್ತೀಚೆಗೆ ಫ್ಯಾಷನಿಸ್ಟ್‌ಗಳು ಕೆಲವೊಂದು ಸೀರೆಗಳನ್ನು ಹಬ್ಬಕ್ಕೂ ಸೈ, ಪಾರ್ಟಿಗಳಿಗೂ ಜೈ ಎನ್ನುವಂತೆ ತಯಾರಿಸಿದ್ದಾರೆ.

ಇಂತಹವುಗಳ ಸಾಲಿನಲ್ಲಿ ಟಿಶ್ಯು ರೇಷ್ಮೆ ಸೀರೆಗಳು ಸೇರಿವೆ. ಯಾವುದೇ ಧಾರ್ಮಿಕ ಕಾರ್ಯವಿರಲಿ, ಶುಭ ಕಾರ್ಯವಿರಲಿ, ಮಹಿಳೆಯರ ಮೊದಲ ಆಯ್ಕೆ ಸೀರೆ. ಅದರಲ್ಲೂ ರೇಷ್ಮೆ ಸೀರೆಗಳಿಗೆ ಮೊದಲ ಸ್ಥಾನ. ಮದುವೆ ಸಮಾರಂಭ ಹಾಗೂ ಇನ್ನಿತರ ಶುಭ ಕಾರ್ಯಗಳಲ್ಲಿ ಟಿಶ್ಯು ರೇಷ್ಮೆ ಸೀರೆಗಳನ್ನು ಧರಿಸುವುದು ಟ್ರೆಂಡಿಂಗ್‌ನಲ್ಲಿದೆ.

ಬಾಲಿವುಡ್‌ನ ಹಿರಿಯ ನಟಿ ರೇಖಾ ತಾವು ಹೋಗುವ ಯಾವುದೇ ಸಭೆ ಸಮಾರಂಭಗಳಲ್ಲಿ ಭರ್ಜರಿ ರೇಷ್ಮೆ ಸೀರೆಗಳಲ್ಲಿ ಮಿಂಚುತ್ತಾರೆ. ಇತ್ತೀಚೆಗೆ ಗೋಲ್ಡನ್ ಕಲರ್‌ನ ಟಿಶ್ಯು ರೇಷ್ಮೆ ಸೀರೆ ಧರಿಸಿ ಒಂದು ಮದುವೆ ಕಾರ್ಯಕ್ರಮಕ್ಕೆ ಬಂದಾಗ ಎಲ್ಲರೂ ಅವಾಕ್ಕಾದರು. ಕಾರಣ ಅವರು ಧರಿಸಿದ ಗೋಲ್ಡನ್ ಟಿಶ್ಯು ರೇಷ್ಮೆ ಸೀರೆ. ಸಂಪೂರ್ಣವಾಗಿ ಬಂಗಾರದ ಎಳೆಗಳಿಂದ ತಯಾರಿಸಲಾದ ಸೀರೆ ಅವರ ಸೌಂದರ್ಯವನ್ನು ಇಮ್ಮಡಿಯಾಗಿಸಿತ್ತು. ಸೀರೆಗೆ ತಕ್ಕ ಜ್ಯುವೆಲರಿಗಳು, ಕೇಶ ವಿನ್ಯಾಸ ಎಲ್ಲವೂ ಅದ್ಭುತವಾಗಿತ್ತು. ಕ್ಷಣಾರ್ಧದಲ್ಲಿ ಇದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಯಿತು.